ದಿನಾಂಕಃ 18-06-2025

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ KNT ಮಾನ್ಯ ವಕೀಲರಿಂದಃ**

ಸರ್ವೆ ನಂಬರ 461 ರಲ್ಲಿ ಎಷ್ಟು ಭಾಗಗಳಾಗಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸರ್ವೆ ನಂಬರ 461 ರ ಸಂಪೂರ್ಣ ವಿಸ್ತೀರ್ಣ ಎಷ್ಟು ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಸರ್ವೆ ನಂಬರ 461ರ ಮೂಲ ಮಾಲಿಕರು ಶ್ರೀ ಬಸವಂತರಾಯ ಮಾಲಿಗೌಡ ಇವರಾಗಿರುತ್ತಾರೆ.ಆದರೆ ನನಗೆ ಮಾಹಿತಿ ಇರುವುದಿಲ್ಲ.

2. ದಾವಾ ಸ್ವತ್ತು ಸರ್ವೆ ನಂಬರ 461 /2 ಇದರ ವಿಸ್ತೀರ್ಣ 8 ಎಕರೆ 3 ಗುಂಟೆ ಇರುತ್ತದೆ. ನನಗೆ ಕನ್ನಡ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದು 6ನೇ ತರಗತಿಯವರೆಗೆ ವಾಸ್ಯಾಂಗ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಿಪಿ.1 ರಲ್ಲಿ ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ 8 ಎಕರೆ 24 ಗುಂಟೆ ಎಂದು ನಮೂದಾಗಿರುತ್ತದೆ. ನಿಪಿ.1 ರಲ್ಲಿ ನಮೂದು ಮಾಡಿರುವ ಒಕ್ಕಣೆಗಳು ಸರಿಯಾಗಿರುತ್ತವೆ.

3. ದಾವಾ ಸ್ವತ್ತು ಸರ್ವೆ ನಂಬರ 461/2 ಕ್ಷೇತ್ರ 8 ಎಕರೆ 24 ಗುಂಟೆ ಪೂರ್ವ ದಿಕ್ಕಿಗೆ ಬರುತ್ತದೆ. ಸದರಿ ದಾವಾ ಸ್ವತ್ತು ಸರ್ವೆ ನಂಬರ 461/2 ರ ದಕ್ಷಿಣಕ್ಕೆ ಮಡ್ಡಿ, ಪಶ್ಚಿಮಕ್ಕೆ ಶ್ರಿ ಸಿದ್ರಾಮರೆಡ್ಡಿ ಬೀಮನಹಳ್ಳಿ ಇವರ ಹೊಲ, ಪೂರ್ವಕ್ಕೆ ಶ್ರೀ ಶಿವರಾಜಪ್ಪ ಆಸಕರ್ರ ಇವರ ಹೊಲ ಹಾಗೂ ಉತ್ತರಕ್ಕೆ ಚಂದ್ರಾಯ ಚಗರ ಇವರ ಹೊಲ ಇರುತ್ತವೆ.

4. ಸದರಿ ಶ್ರಿ ಸಿದ್ರಾಮರೆಡ್ಡಿ ಬೀಮನಹಳ್ಳಿ, ಶಿವರಾಜಪ್ಪ ಹಾಗೂ ಚಂದರಾಯ ಇವರ ಹೊಲಗಳ ಸರ್ವೆ ನಂಬರ ಎಷ್ಟಿರುತ್ತವೆ ಎಂದು ನನಗೆ ನಿಖರವಾಗಿ ಗೊತ್ತಿರುವುದಿಲ್ಲ.

5. ನಾನು ಸನ್ 1981 ರಿಂದ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುತ್ತೇನೆ. ನಾನು ಸನ್ 1981 ರಿಂದ ಪ್ರಸ್ತುತ ದಾವೆಯನ್ನು ಸಲ್ಲಿಸುವವರೆಗೆ ನಾನೇ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ

ಇರುತ್ತೇನೆ ಎಂದು ತೋರಿಸಲು ಯಾವುದೇ ಕಂದಾಯ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ತಂದೆಯ ಕಾಲದಲ್ಲಿ ತಹಶೀಲ್ದಾರ ಇವರು ಕಂದಾಯ ಭೂಮಿದಾರರಿಗೆ ಸಾಗುವಳಿ ಚೀಟಿಯನ್ನು ಕೋಡುತ್ತಿದ್ದರು, ಆದರೆ ಈಗ ಕೊಡುತ್ತಿಲ್ಲ. ಈಗ ತಹಶೀಲ್ದಾರ ಇವರು ಸಾಗುವಳಿ ಚೀಟಿಯನ್ನು ಕೊಡುತ್ತಿಲ್ಲ ಎಂದು ಅವರಿಂದ ಯಾವುದೇ ಹಿಂಬರಹವನ್ನು ಪಡೆದುಕೊಂಡು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಸನ್ 1981 ರಿಂದ ಪ್ರಸ್ತುತ ದಾವೆಯನ್ನು ಸಲ್ಲಿಸುವವರೆಗೆ ನಾನೇ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿಇರುತ್ತೇನೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಿಪಿ.2 ರಂತೆ ದಾವಾ ಸ್ವತ್ತು ಸರ್ವೆ ನಂಬರ 540/1/3 ಇದರ ಮಾಲಿಕರು 2ನೇ ಪ್ರತಿವಾದಿಯಾಗಿರುತ್ತಾರೆ ಎಂದರೆ ಸರಿ.

7. ನನ್ನ ವಾದ ಪತ್ರದ ಮಾಹಿತಿಗಳನ್ನು ನನ್ನ ಮಾನ್ಯ ವಕೀಲರಿಗೆ ನನ್ನ ಮಗ ಕೊಟ್ಟಿರುತ್ತಾರೆ. ನನ್ನ ಸದರಿ ಮಗ ಯಾವ ಆಧಾರದ ಮೇಲೆ ಸದರಿ ಮಾಹಿತಿಗಳನ್ನು ನನ್ನ ಮಾನ್ಯ ವಕೀಲರಿಗೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ವಾದ ಪತ್ರದಲ್ಲಿ ಸಂಪೂರ್ಣವಾದ ಮಾಹಿತಿಗಳು ನನ್ನ ಮಗನಿಗೆ ಮಾತ್ರ ತಿಳಿದಿರುತ್ತವೆ ಎಂದರೆ ಸರಿ.

8. ನಮ್ಮ ಮನೆತನಕ್ಕೆ ಸಂಬಂಧಿಸಿದ ಆಸ್ತಿಗಳಲ್ಲಿ ಒಂದು ಸಲ ವಾಟಣಿ ಆಗಿರುತ್ತವೆ.

**ಈ ಹಂತದಲ್ಲಿ ಪ್ರತಿವಾದಿ ಪರ ಮಾನ್ಯ ವಕೀಲರಿಂದ ಮುಂದುವರೆದ ಪಾಟಿ ಸವಾಲಿಗೆ ವೇಳೆ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.